ಕಥೆ



**ಶ್ರುತಿ ಬಿ.ಆರ್.**

ಕಲೆ: ಮುರಳೀಧರ್ ರಾಥೋಡ್

# ಧಾರೆ

ಸುನಂದಮ್ಮ ನೆನ್ನೆ ಸಂಜೆಯಿಂದಲೂ ಅನುಭವಿಸುತ್ತಿರುವ ತಳಮಳ ಯಾರ ಅಂದಾಜಿಗೂ ಸಿಗುವಂತದ್ದಲ್ಲ. ಆಗಾಗ ನಿಡುಸುಯ್ಯುತ್ತಾ, ಸುಮ್ಮನೆ ಜಿನುಗುವ ಕಣ್ಣೀರ ಅಡಗಿಸುತ್ತಾ, ಏನೋ ಕೆಲಸ ಮಾಡಲು ಹೋಗಿ ಅದನ್ನೇ ಮರೆತು ನಿಲ್ಲುತ್ತಿದ್ದಳು. ತನ್ನ ಮಕ್ಕಳೂ ಯಾಕೆ ತನ್ನನ್ನು ಅರ್ಥ ಮಾಡಿಕೊಳ್ಳುತ್ತಿಲ್ಲವೆಂದು ಅಸಹಾಯಕತೆ ಆವರಿಸಿತ್ತು. ನಲವತ್ತೈದು ವರ್ಷ ಒಂಟಿಯಾಗಿ ಆ ಹಳ್ಳಿಯಲ್ಲಿ ಗಂಡ ಬಿಟ್ಟವಳೆನಿಸಿಕೊಂಡು, ಎರಡೆಕರೆ ಜಮೀನನ್ನು ಜೋಪಾನ ಮಾಡಲು, ಮಕ್ಕಳ ಹೊಟ್ಟೆ ತುಂಬಿಸಲು ಪಟ್ಟ ಕಷ್ಟಗಳೆಲ್ಲ ಕಣ್ಮುಂದೆ ಬಂದಿದ್ದವು. ಪ್ರೀತಿಯ ಮೊಮ್ಮಗಳ ಮದುವೆ ಎಂಬ ಸಂಭ್ರಮವಿದ್ದರೂ, ಮನಸ್ಸಿನ ಮೇಲಾಗುತ್ತಿರುವ ಒತ್ತಡ ಆ ಸಂತೋಷವನ್ನು ಅನುಭವಿಸಲೂ ತಡೆಯುಂಟುಮಾಡುತ್ತಿತ್ತು. ರಾತ್ರಿಯಿಡೀ ನಿದ್ದೆ ಬಾರದೆ ಒದ್ದಾಡಿ, 9:30ಕ್ಕೆ ಇರುವ ಮುಹೂರ್ತಕ್ಕೆ ಮೂರು ಗಂಟೆಗೇ ಎದ್ದುಕೂತ ಸುನಂದಮ್ಮನಿಗೆ ತನ್ನ ಸಮಸ್ಯೆಗೆ ಇನ್ನೂ ಪರಿಹಾರ ಸಿಕ್ಕಿರಲಿಲ್ಲ. ಯೋಚನೆಗಳ ಭಾರಕ್ಕೆ ತಲೆನೋವು ಹೆಚ್ಚಾಗಿತ್ತು. ರಾತ್ರಿ ಊಟವೂ ಸರಿಯಾಗಿ ಮಾಡಲಾಗಿರಲಿಲ್ಲ.

ಒಬ್ಬನೇ ಗಂಡು ಮಗ ಹೀಗೆ ಒತ್ತಾಯ ಮಾಡುತ್ತಿರುವುದರಲ್ಲಿ ತಪ್ಪಿಲ್ಲ. ಎಷ್ಟಾದರೂ ಅವನಿಗೆ ತನ್ನ ಮಗಳ ಮದುವೆಯೇ ಮುಖ್ಯ, ಆದರೆ ಹೆಣ್ಣು ಮಕ್ಕಳಾದರೂ ಅವನಿಗೆ ತಿಳಿಸಿ ಹೇಳಬಹುದಿತ್ತು, ಆದರೆ ತಾನೇನೋ ಕಾರಣವಿಲ್ಲದೆ ಸುಮ್ಮನೆ ಹಟ ಮಾಡುತ್ತಿದ್ದೇನೆ ಎಂಬಂತೆ ತನಗೇ ಬುದ್ಧಿ ಹೇಳುತ್ತಿದ್ದಾರೆ. ನಲವತ್ತೈದು ವರ್ಷಗಳ ಹಿಂದೆಯೇ ಎಲ್ಲಾ ಜವಾಬ್ದಾರಿ ತೊರೆದು ಸ್ವಾರ್ಥಿಯಂತೆ ಹೊರಟು ಹೋದವನ ಮುಖ ನೋಡಲೂ ಇಷ್ಟವಿಲ್ಲ, ಅವನೆಂದರೇ ತೀರದ ಅಸಹ್ಯ, ಅಂತದರಲ್ಲಿ ಅವನ ಜೊತೆ... ಎಂದೆಲ್ಲಾ ಯೋಚನೆಗಳ ಭಾರಕ್ಕೆ ಕುಗ್ಗಿದ್ದಳು.

ಸುನಂದಳ ಗಂಡನಾಗಿದ್ದ ಮಲ್ಲಿಕಾರ್ಜುನಯ್ಯ ಯಾವತ್ತಿಗೂ ಕಷ್ಟಜೀವಿಯಾಗಿರಲಿಲ್ಲ. ರಾಜಕಾರಣ, ಇಸ್ಪೀಟು, ರೇಸು, ಜ್ಯೋತಿಷ, ಮನೆ ಸೈಟು ದಲ್ಲಾಳಿ ಕೆಲಸ ಎಲ್ಲವೂ ಅವನಿಗೆ ಅಮಲೇರಿಸುತ್ತಿದ್ದವು. ಹಳ್ಳಿಯ ಇತರರಂತೆ ಮುಳುಗಡೆಯ ನಂತರ ಹೊಸ ಊರಿನಲ್ಲಿ ಕೊಟ್ಟ ಒನ್ ಟು ಡಬಲ್ ಜಮೀನನ್ನು ತನ್ನ ಪಾಡಿಗೆ ಉಳುಮೆ ಮಾಡಿ, ಶುಂಠಿ, ಆಲೂಗೆಡ್ಡೆ, ಹೊಗೆಸೊಪ್ಪು, ಭತ್ತ, ಮುಸುಕಿನ ಜೋಳ ಅಂತಾ ಬೆಳ್ಕೊಳ್ತಾ, ಇರೋ ಜೀವನ ಅಂದ್ರೆ ಬೇಜಾರು. ಇದ್ದ ಹತ್ತು ಎಕರೆ ಜಮೀನಿನಲ್ಲಿ ಏಳೆಂಟು ಎಕರೆ ನುಂಗಿ ನೀರು ಕುಡಿದಿದ್ದ. ಅವನಿಗೇನಿದ್ದರೂ ದೊಡ್ಡ ದೊಡ್ಡವರ ಹಿಂದೆ ಮುಂದೆ ತಿರುಗಿ, ಎಲ್ಲರ ಹತ್ತಿರ ಬೊಗಳೆ ಬಿಡುತ್ತಾ, 'ಅವರು ನನಗೆ ಬೇಕಾದವರು ಇವರು ಆಪ್ತರು' ಎಂದು ಹೇಳಿಕೊಂಡು, ಸಿಕ್ಕ ಸಿಕ್ಕವರ ಬಳಿ ಹೇಗಾದರೂ ದುಡ್ಡು ಕೀಳುತ್ತಾ, ಒಳ್ಳೆಯ